ಇ) ಭೂಸುಧಾರಣಾ ಕಾಯಿದೆಯಡಿ ದೇವಾಲಯದ ಜಮೀನುಗಳು ರೈತರ ವಶ ಆಗಿರುತ್ತದೆ ಭೂ ಸುಧಾರಣೆಯ ಕಾಯಿದೆಯ ಹೊರತಾಗಿ ಬೇರೆ ಯಾವ ಕಾರಣಗಳಿಂದಲೂ ಶ್ರೀ ದೇವಳದ ಜಮೀನು ಪರರ ವಶ ಆಗಿರುವುದಿಲ್ಲ.

ಈ) ದೇವಳದ ವಶದಲ್ಲಿರುವ 40 ಎಕರೆ 64 ಸೆಂಟ್ಸ್ ಪ್ರದೇಶಗಳಿಗೆ ತಡೆ ಬೇಲಿ ಹಾಕಲು ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ದೇವಸ್ಥಾನದ ಉಳಿಕೆ 5 ಎಕರೆ 23 ಸೆಂಟ್ಸ್ ಜಾಗದಲ್ಲಿ ವಾಸಿಸುತ್ತಿರುವ ಬಾಡಿಗೆದಾರರ : ಒಕ್ಕಲುಗಳ ಬಾಡಿಗೆ : ಗುತ್ತಿಗೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

ತಿರುಮಲದ ಕರ್ನಾಟಕ ಛತ್ರದ ನಿರ್ವಹಣೆ

299 (2464) ಶ್ರೀ ಸುಬ್ಬಾರೆಡ್ಡಿ ಕೆ.ಎನ್ (ಬಸವನಗುಡಿ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ತಿರುಮಲದಲ್ಲಿರುವ ಕರ್ನಾಟಕ ಛತ್ರದ ನಿರ್ವಹಣೆ ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

3) ತಿರುಮಲದಲ್ಲಿರುವ ಕರ್ನಾಟಕ ಛತ್ರಕ್ಕೆ ಸಂಬಂಧಪಟ್ಟಂತೆ ಹೊಸ ಸಲಹಾ ಸಮಿತಿ ರಚಿಸಲಾಗಿದೆಯೇ?

4) ರಚಿಸದೇ ಇದ್ದಲ್ಲಿ, ಯಾವಾಗ ರಸಚಿಸಲಾಗುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

1) ಬಂದಿದೆ

2) ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರದಲ್ಲಿ ಖಾಲಿ ಇದ್ದಂತಹ ವಿಶೇಷ ಅಧಿಕಾರಿಗಳು ಹಾಗೂ ಉಪ ವಿಶೇಷಾಧಿಕಾರಿಗಳ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಿಸಲಾಗಿದ್ದು, ಸದರಿ ಅಧಿಕಾರಿಗಳು ರಾಜ್ಯ ಛತ್ರದ ಸಮರ್ಪಕ ನಿರ್ವಹಣೆ ಬಗ್ಗೆ ಕ್ರಮ ತೆಗೆದುಕೊಂಡಿರುತ್ತಾರೆ. ಛತ್ರದ ಕೊಠಡಿಗಳು, ಕುಠೀರಗಳು ಇತ್ಯಾದಿ ದುರಸ್ಥಿ ಕಾರ್ಯಕ್ಕೆ ಸರ್ಕಾರವು ರೂ. 50.00ಲಕ್ಷ ಅನುದಾನ ನೀಡಿದ್ದು, ಸದರಿ ಕಾಮಗಾರಿಗಳನ್ನು ಲೊಕೋಪಯೋಗಿ ಇಲಾಖೆ ಕೋಲಾರ ರವರು ಅನುಷ್ಠಾನಗೊಳಿಸುತ್ತಿದ್ದಾರೆ. ಇದರಲ್ಲಿ ಸುಮಾರು 43 ಲಕ್ಷ ರೂಪಾಯಿಗಳ ಕಾಮಗಾರಿ ಮುಗಿದಿದೆ.

3. ರಚಿಸಿರುವುದಿಲ್ಲ.

4. ಪರಿಶೀಲಿಸಲಾಗುತ್ತಿದೆ.

ಚಾಮರಾಜನಗರ ಜಿಲ್ಲೆಗೆ ಲೋಕೋಪಯೋಗಿ ಇಲಾಖೆಯಲ್ಲಿ ನಬಾರ್ಡ್ ಕಾಮಗಾರಿ

300 (2455) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಗೆ ಕಳೆದ ವರ್ಷಗಳಿಂದ ಮಂಜೂರಾಗಿರುವ ನಬಾರ್ಡ್ ಕಾಮಗಾರಿಗಳ ಕ್ಷೇತ್ರವಾರು ವಿವರವನ್ನು ನೀಡುವುದು;

ಆ) ಮಂಜೂರಾಗಿರುವ ಕಾಮಗಾರಿಗಳು ಪೂರ್ಣಗೊಂಡಿವೆಯೇ;

ಇ) ಅದೇ ರೀತಿ 3 ವರ್ಷಗಳ ಸಿ.ಆರ್.ಎಫ್.ನಿಧಿಗಳ ವಿವರಗಳನ್ನು ನೀಡುವುದು;

ಈ) ಜಿಲ್ಲೆಯಲ್ಲಿ 3 ವರ್ಷದಿಂದ ಬಿಡುಗಡೆಯಾಗಿರುವ ಎ.ಆರ್.ಹಣದ ಕ್ಷೇತ್ರವಾರು ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಚಾಮರಾಜನಗರ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ ಕಳೆದ 3 ವರ್ಷಗಳಿಂದ ರೂ 948.61 ಲಕ್ಷ ಮೊತ್ತದ 15 ರಸ್ತೆ ಮತ್ತು 2 ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) 12 ರಸ್ತೆ ಮತ್ತು 1 ಸೇತುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಇ) ಕಳೆದ 3 ವರ್ಷಗಳಲ್ಲಿ ಸಿಆರ್ ಎಫ್ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿ ಯಾವುದೇ ಕಾಮಗಾರಿ ಮಂಜೂರಾಗಿರುವುದಿಲ್ಲ.

ಈ) ಚಾಮರಾಜನಗರ ಜಿಲ್ಲೆಗೆ 1999ರಿಂದ ಇಲ್ಲಿಯವರೆಗೆ ರಸ್ತೆಗಳ ದುರಸ್ತಿಗೆ 646.81 ಲಕ್ಷ ರೂಗಳ ಹಣ ಬಿಡುಗಡೆಯಾಗಿದೆ.

ಕ್ಷೇತ್ರಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಗುರುಸ್ವಾಮಿ ಸಿ. ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2455 ರ ಅನುಬಂಧ

ಕ್ರಮ ಸಂಖ್ಯೆ	ವರ್ಷ	ವಿಧಾನಸಭಾ ಕ್ಷೇತ್ರ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷ ರೂಗಳಲ್ಲಿ	ಷರಾ
1	1999-2000	ಚಾಮರಾಜನಗರ	ಉಡಿಗಾಲ ಕಬ್ಬಳ್ಳಿ ರಸ್ತೆ ಅಭಿವೃದ್ಧಿ	87.53	ಪೂರ್ಣಗೊಂಡಿದೆ
2.	1999-2000	ಚಾಮರಾಜನಗರ	ಉಡಿಗಾಲದಿಂದ ಬಡಗಲಪುರು ಎಣ್ಣೆಹೊಳೆ ಮಹದೇಶ್ವರ ಬೆಟ್ಟ, ಹೊನ್ನಹಳ್ಳಿ ಮಾರ್ಗ ಹೆಚ್ ಎ ರಸ್ತೆಗೆ ಸೇರುವ ರಸ್ತೆ ಅಭಿವೃದ್ಧಿ	56.70	ಪೂರ್ಣಗೊಂಡಿದೆ
3.	2000-2001	ಚಾಮರಾಜನಗರ	ಉಡಿಗಾಲದಿಂದ ಹೆಚ್ ಎ ರಸ್ತೆ ಕುತಲವಾಡಿ ಮಾರ್ಗ ಸೇರುವ ರಸ್ತೆ ಅಭಿವೃದ್ಧಿ	80.00	ಪೂರ್ಣಗೊಂಡಿದೆ
4.	2000-2001	ಚಾಮರಾಜನಗರ ಸಂತೆಮರಹಳ್ಳಿ	ಕುದೇರು-ತೊರವಳ್ಳಿ ಕೆಸ್ತೂರು ಮರಿಯಾಲ ರಸ್ತೆ ಅಭಿವೃದ್ಧಿ (ಭಾಗ)	60,00	ಪೂರ್ಣಗೊಂಡಿದೆ
5.	2000-2001	ಸಂತೆಮರಹಳ್ಳಿ	ಪಾಣ್ಯದ ಹುಂಡಿ-ಉಮ್ಮತ್ತೂರು ರಸ್ತೆ ಅಭಿವೃದ್ಧಿ	53.13	ಪೂರ್ಣಗೊಂಡಿದೆ
6.	2000-2001	ಸಂತೆಮರಹಳ್ಳಿ	ಸಂತೆಮರಹಳ್ಳಿ-ಹೆಬ್ಬಸೂರು ರಸ್ತೆ ಅಭಿವೃದ್ಧಿ	56.65	ಪೂರ್ಣಗೊಂಡಿದೆ

7. 2001-2002	ಸಂತೆಮರಹಳ್ಳಿ	ಬಾನಹಳ್ಳಿ-ಬಾಗಲಿ-ಚನ್ನೂರು ರಸ್ತೆಯ 220 ಕಿಮೀ ನಲ್ಲಿ ಸೇತುವೆ ಸೇತುವೆ ನಿರ್ಮಾಣ	37.06	ಪೂರ್ಣಗೊಂಡಿದೆ
8. 2000-2001	ಗುಂಡ್ಲುಪೇಟೆ	ಮಾಲಾಪುರ-ಕಂದಗೆರೆ ರಸ್ತೆ ಅಭಿವೃದ್ಧಿ	45.00	ಪ್ರಗತಿಯಲ್ಲಿದೆ
9. 2000-2001	ಗುಂಡ್ಲುಪೇಟೆ	ಎಡೇಹುಂಡಿಯಿಂದ-ಎಂ.ಕೆಟಿ.ರಸ್ತೆ ಯನ್ನು ಸೇರುವ ರಸ್ತೆ ಅಬಿವೃದ್ಧಿ	40.92	ಪ್ರಗತಿಯಲ್ಲಿದೆ
10. 2000-2001	ಗುಂಡ್ಲುಪೇಟೆ	ದೇವರಹಳ್ಳಿ-ಕಗ್ಗಲಹುಂಡಿ ರಸ್ತೆ ಅಭಿವೃದ್ಧಿ	41.17	ಪೂರ್ಣಗೊಂಡಿದೆ
11. 2001-2002	ಗುಂಡ್ಲುಪೇಟೆ	ಹಾಂಗಲ-ಮದ್ದೂರು ರಸ್ತೆಯ ಕಿಮೀ 6.20 ರಲ್ಲಿ ಗೋಪಾಲಪುರದ ಬಳಿ ಸೇತುವೆ ನಿರ್ಮಾಣ	20.00	ಪ್ರಗತಿಯಲ್ಲಿದೆ
12. 1999-2000	ಕೊಳ್ಳೇಗಾಲ	ತಗರಪುರ-ಯಳಂದೂರು ರಸ್ತೆ ಸೇರುವ ರಸ್ತೆ ಅಭಿವೃದ್ಧಿ	74.00	ಪೂರ್ಣಗೊಂಡಿದೆ
13. 2000-2001	ಕೊಳ್ಳೇಗಾಲ	ಕೊಳ್ಳೇಗಾಲ-ಮಳ್ಳೂರು ರಸ್ತೆ ಅಭಿವೃದ್ಧಿ	30.00	ಪೂರ್ಣಗೊಂಡಿದೆ
14. 2000-2001	ಕೊಳ್ಳೇಗಾಲ	ಕೊಳ್ಳೇಗಾಲ-ಗುಂಬಳ್ಳಿ-ಯರಗಂಬಳ್ಳಿ ದಾಸರಹಳ್ಳಿ ಕೆ.ದೇವರಹಳ್ಳಿ ರಸ್ತೆ ಅಭಿವೃದ್ಧಿ	64.13	ಪೂರ್ಣಗೊಂಡಿದೆ
15. 2001-2002	ಕೊಳ್ಳೇಗಾಲ	ಯರೆಯೂರಿನಿಂದ ಕೊಳ್ಳೇಗಾಲ ಮೂಗೂರು ರಸ್ತೆ ಸೇರುವ ರಸ್ತೆ ಅಭಿವೃದ್ಧಿ	68.32	ಪ್ರಗತಿಯಲ್ಲಿದೆ
16. 2000-2001	ಹನೂರು	ಬೋಳೇಗೌಡನದೊಡ್ಡಿ ತೆಲ್ಲನೂರು ರಸ್ತೆ ಅಭಿವೃದ್ಧಿ	85.00	ಪೂರ್ಣಗೊಂಡಿದೆ
17. 2000-2001	ಕೊಳ್ಳೇಗಾಲ	ಕಾಮಗೇರಿ ಮನಗಳ್ಳಿ ರಸ್ತೆ ಅಭಿವೃದ್ಧಿ	99.00	ಪೂರ್ಣಗೊಂಡಿದೆ

ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ವಾರ್ಷಿಕ ದುರಸ್ತಿ ಹಣದ ಕ್ಷೇತ್ರವಾರು ವಿವರ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರದ ಹೆಸರು	1999-2000	2000-2001	2001-2002	2002-2003	ಒಟ್ಟು
1.	ಚಾಮರಾಜನಗರ	41.95	50.10	26.16	16.92	135.13
2.	ಸಂತೇಮರಹಳ್ಳಿ	33.51	20.18	26.66	13.52	93.87
3.	ಗುಂಡ್ಲುಪೇಟೆ	34.64	34.41	36.36	21.43	126.84
4.	ಕೊಳ್ಳೇಗಾಲ	75.09	34.73	22.40	10.63	142.85
5.	ಹನೂರು	34.35	52.85	42.42	18.50	148.12
	ಒಟ್ಟು	219.54	192.27	154.00	81.00	646.81